ತಳವೂರಿ ಮಕ್ಕಳನ್ನು ಹೆತ್ತು ಸುಖವಾಗಿ ಬದುಕುತ್ತಿದ್ದರೆ ಎಷ್ಟೊಂದು ಚಂದ ಅಲ್ಲವೆ ಅನಿಸುವುದುಂಟು. ಹಾಗೆ ತಾನಂದುಕೊಂಡಂತೆಯೆ ನಡೆದು ಅವಳು ಮಕ್ಕಳ ಸಮೇತ ತನ್ನನ್ನು ಕಾಣಲು ಬಂದರೆ... ಎಂದು ಕಂಗಳನ್ನು ಅರಳಿಸಿ ಪುಳಕಗೊಳ್ಳುತ್ತಾಳೆ. ಮರುಕ್ಷಣದಲ್ಲೇ ಅವಳು ಹರಿದ ಮಾಂಸದ ಶವದಂತೆ ಕಂಡು ಕಂಗಳಲ್ಲಿ ದುಃಖ ಮಡುಗಟ್ಟುತ್ತದೆ. ನೊಣಗಳು ಆ ಕಂಗಳನ್ನು ಮುತ್ತಿಕೊಳ್ಳುತ್ತವೆ.

'ಯೆಂಗಿದ್ದೋಳು ಯೆಂಗೆ ಮಲಗಿಬಿಟ್ಟೆ ರಂಗಮ್ಮ' ಎನ್ನುತ್ತಾ ಬಂದ ಊರ ಉತ್ತರ ಭಾಗದ ಕೊನೆಗಿರುವ ಮನೆಯ ಶಾರದಾ, ರಂಗಜ್ಜಿಯ ಹತ್ತಿರ ಬಂದಳು. ದಿವಾನಾದ ಬಳಿಗೆ ಪಡಸಾಲೆಯ ಮತ್ತೊಂದು ಬದಿಗಿರುವ ಕುರ್ಚಿಯನ್ನು ಎಳೆದುಕೊಂಡು ಕುಳಿತುಕೊಂಡಳು. ರಂಗಜ್ಜಿ ಅರ್ಧ ಕಣ್ಣುತೆರೆದು ಶಾರದಾಳ ಕಡೆಗೆ ನೋಡಿದಳು. ವಯಸ್ಸಿನಲ್ಲಿ ತನಗಿಂತ ಇಪ್ಪತ್ತು ವರ್ಷ ಚಿಕ್ಕವಳಾದರೂ ಊರ ಮಂದಿಯನ್ನು ಕಂಡರೆ ಎಷ್ಟೊಂದು ಕಕ್ಕುಲಾತಿ ಎಂದುಕೊಂಡಳು. 'ಏನ್ಮಾಡ್ಲಿ ಶಾರದಾ ಏಳೂಕಾಗ್ತಿಲ್ಲ. ಕಸ್ಟಪಟ್ಟು ಏಳೋಣಾಂತಂದ್ರೆ ಎಮಕೆಗಳು ಮುರಿದಂಗಾಗ್ತವೆ' ಎಂದು ನುಡಿದ ರಂಗಜ್ಜಿ ಶಾರದಾಳ ಕಡೆಗೇ ನೋಡತೊಡಗಿದಳು. ಶಾರದಾ ರಂಗಜ್ಜಿಯ ಹಣೆಯನ್ನು ಹಿತವಾಗಿ ಅದುಮಿ ಹಿಡಿದಳು. ತಲೆನೋವು ಕಮ್ಮಿಯಾದಂತನಿಸಿತು. ತಾನು ಯಾರಲ್ಲಿಯೂ ತನಗೆ ವಿಪರೀತ ತಲೆನೋವು ಇದೆಯೆಂದು ಹೇಳಿಕೊಂಡಿಲ್ಲವಲ್ಲ? ಆದರೂ ಇವಳಿಗೆ ಹೇಗೆ ಗೊತ್ತಾಯಿತು ಎನ್ನುವಂತೆ ಚಕಿತಗೊಂಡಳು. 'ನಂಕೆ ತಲಪೋಟ್ಲು ಇದೇಂತ ನಿಂಕೆಂಗೊತ್ತು' ಕೇಳಿದಳು. ಶಾರದಾ ರಂಗಜ್ಜಿಯ ಹಣೆಯ ಮೇಲ್ಭಾಗವನ್ನು ಹಿತವಾಗಿ ಸವರುತ್ತಾ 'ಏನಾರ ಉಂಡ?' ಎಂದು ಕೇಳಿದಳು. ಸ್ವಲ್ಪ ಹೊತ್ತು ಮೌನವಾದ ರಂಗಜ್ಜಿ ನಂತರ ಕಣ್ಣು ಮುಚ್ಚಿಕೊಂಡು 'ಯಾತ್ಕಾಗಿ ಉಣ್ಣೋದು ಬಿಡು ಶಾರ್ದ' ಎಂದು ತಗ್ಗಿದ ದನಿಯಲ್ಲಿ ನುಡಿದಳು. ರಂಗಜ್ಜಿಗೆ ಐದಾರು ದಿನಗಳಿಂದ ಊಟ ಸೇರುತ್ತಿಲ್ಲವೆಂಬ ವಿಷಯ ಶಾರದಾಳಿಗೂ ಗೊತ್ತಿರುವಂತದ್ದೆ. ಹಾಗಾಗಿಯೆ ಮಾತನಾಡಿಸಲು ಬಂದಿದ್ದಳು. ಶಾರದಾ ಮತ್ತೆ 'ಅಲ್ಲಕ್ಕ, ಏನಾರ ಉಂಡ್ರೆ ತಾನೆ ದೇಹ ನಿಂತುಕೊಳ್ಳೋದು... ವೋಗ್ಲಿ ಎಳ್ನೀರು ಕುಡಿತೀಯ? ನಮ್ಮ ಮರದ್ದೆ ಐತೆ. ಕಳಿಸ್ಲ?' ಎಂದು ಕೇಳಿದಳು. ರಂಗಜ್ಜಿ ಆಯ್ತು ಎನ್ನುವಂತೆ ತಲೆ ಆಡಿಸಿದಳು. ಹಾಗೇ ಸ್ವಲ್ಪ ಹೊತ್ತು ಅದೂ ಇದೂ ಮಾತನಾಡುತ್ತಲಿದ್ದ ಶಾರದಾ ನಂತರ ಸಂಜೆಗೆ ಎಳನೀರು ಕಳಿಸುವುದಾಗಿ ಹೇಳಿ ಹೊರಟುಬಿಟ್ಟಳು. ಶಾರದಾಳು ಇರುವ ಅಷ್ಟೂ ಹೊತ್ತು ಅವಳ ಕೈ ರಂಗಜ್ಜಿಯ ಹಣೆಯ ಮೇಲೇ ಇತ್ತು. ಅವಳು ಹೋದ ಮೇಲೂ ರಂಗಜ್ಜಿಗೆ ಅವಳ ಕೈ ತನ್ನ ಹಣೆಯ ಮೇಲೆಯೇ ತಣ್ಣಗೆ ಇರುವಂತೆ ಅನಿಸತೊಡಗಿತು. ಗಾಳಿಯೂ ತುಸು ತಂಪಾಗಿ ಬೀಸಿತು. ಹಾಗೇ ನಿಧಾನಕ್ಕೆ ನಿದ್ದೆಗೆ ಜಾರಿದಳು.

ನಿದ್ದೆಯಲ್ಲಿ ದೊಡ್ಡ ಮೀಸೆ ಮತ್ತು ಕೋರೆ ಹಲ್ಲು ಹೊತ್ತ ಬೃಹದಾಕಾರದ ತಲೆಯೊಂದು ಅಟ್ಟಿಸಿಕೊಂಡು ಬರತೊಡಗಿತು. ಅದು ಇನ್ನೇನು ತನ್ನ ಕೋರೆಹಲ್ಲುಗಳಿಂದ ಇರಿದು ರಕ್ತ ನೆಕ್ಕಿ ಕಚಕಚನೆ ಜಗಿದು ನುಂಗಿಬಿಡುತ್ತದೆ ಎಂದು ಆತಂಕಗೊಂಡಳು. ಅದರಿಂದ ತಪ್ಪಿಸಿಕೊಳ್ಳಲು ಉಸಿರು ಬಿಗಿಹಿಡಿದು ಓಡತೊಡಗಿದಳು. ತುಸು ದೂರದಲ್ಲಿ ನದಿಯೊಂದು ಭೋರ್ಗರೆಯುತ್ತಾ ಹರಿಯುತ್ತಿರುವುದು ಕಾಣಿಸಿತು. ಆ ವಿಕೃತ ತಲೆಗೆ ಆಹಾರವಾಗುವ ಬದಲು ನದಿಯಲ್ಲಿ ಧುಮುಕಿಬಿಡುವ ಎಂದುಕೊಂಡು ಓಡತೊಡಗಿದಳು. ಹಾಗೆ ಓಡಿ ನದಿಯ ಬಳಿ ನಿಂತುಕೊಂಡವಳಿಗೆ ಅಲ್ಲಿ ನೀರಿನ ಬದಲು ಕಂಡದ್ದು ವೀರ್ಯ. ಇದರೊಳಗೆ ಬೀಳುವುದೆ? ಮತ್ತೂ ದಿಗಿಲುಗೊಂಡಳು. ಅದರ ಅಂಚಿನಲ್ಲಿ ಉದ್ದಕ್ಕೂ ಓಡತೊಡಗಿದಳು. ಅವಳ ಬಲಕ್ಕೆ ವೀರ್ಯವನ್ನು ತುಂಬಿಕೊಂಡ ನದಿ ಭೋರ್ಗರೆಯುತ್ತಲಿತ್ತು. ಎಡಕ್ಕೆ ಹಿಂದಿನಿಂದ ಬೃಹದಾಕಾರದ ತಲೆ ಅಟ್ಟಿಸಿಕೊಂಡು ಬರತೊಡಗಿತು. ಅವಳು ಮತ್ತೂ ಓಡತೊಡಗಿದಳು. ನದಿ ಸಮುದ್ರವನ್ನು ಸೇರಿಕೊಂಡಿತು. ದಡದಲ್ಲಿ ನಿಂತು ಸಮುದ್ರದ ಕಡೆಗೆ ನೋಡಿದಳು. ಸಮುದ್ರದ ನೀರೆಲ್ಲವೂ ವೀರ್ಯವೇ ಆಗಿತ್ತು. ಆಳ, ಅಗಲ, ಅಲೆ... ಎಲ್ಲವೂ ಅದೇ ಅಂದುಕೊಂಡಳು. ಸಮುದ್ರ ಪ್ರಶಾಂತವಾಗೇ ಇತ್ತು. ಅಟ್ಟಿಸಿಕೊಂಡು ಬರುತ್ತಿರುವ ತಲೆಯ ಕಡೆಗೆ ನೋಡಿದಳು. ಅದು ಆಕಾಶದಲ್ಲಿ ಮೋಡಗಟ್ಟಿತ್ತು. ಸದ್ಯ, ತಪ್ಪಿಸಿಕೊಂಡೆ ಎನ್ನುವಂತೆ ಮತ್ತೆ ಸಮುದ್ರದ ಕಡೆಗೆ ತಿರುಗಿದಳು. ಆಕಾಶದೆತ್ತರಕ್ಕೆ ನಿಂತಿದ್ದ ಸುನಾಮಿ ಅಲೆಯೊಂದು ಅವಳ ಮೇಲೆ ಹಾರಿ